ಸಾಧಿಸತಕ್ಕ ಸತ್ಕ್ರಿಯೆಗಳಂ ನೆಗ*ೞ್ದಂತುಟು ದಂದುಗಂಗಳಿಂ ।
ಪೋದೊಡೆ ಕಾಲಮೆಲ್ಲ ಶುಭಕಾಲವಲಾ ಅಪರಾಜಿತೇಶ್ವರಾ ॥೪೭

[1] ನುಡಿವೊಡೆ ದೇವ ನಿಮ್ಮಯ ಮಹಾಸಭೆಯೊಳ್ನುಡಿವಂತಿರೋಜೆಯಿಂ।
ನುಡಿವುದು ಪೋಗುವಲ್ಲಿ ಮುಳುವಟ್ಟೆಯೊಳೆಯ್ದುವನಂತಿರೋ[ಜೆಯಿಂ ॥
ನಡೆವುದು ಕುಳ್ಳಿರಿಪ್ಪೊಱಗುವೆಲ್ಲೆಡೆಯೊಳ್ಸಱಸಿಲ್ಕದಾತನಂ ।
ತೊಡನೆ ನಿಜಾತ್ಮಚಿಂತೆಯೊಳಹಂಗಘವೇನಪರಾಜಿತೇಶ್ವರಾ ॥೪೮

ಲೋಕದ ವಾರ್ತೆಯೊಳ್ಬಧಿರನಾತ್ಮಹಿತಂ ಪೊಱಗಾದ ಮಾತಿನೊಳ್ ।
ಮೂಕತೆ ತನ್ನದೇಹಪರದೇಹದ ನೋಟದೊಳಂಧಕಂ ಪ್ರಮಾ ॥
ದೈಕದೆ ಕಂಡು ರಾಗಿಸಿದೊಡಂ ಸುಡು ಮಾಂಸವಿಕಾರಮೆಂದು ಮೆ ।
ಯ್ಯೋಕರಿಪಾತನಂತಕನನಂಜಿಸನೇ ? ಅಪರಾಜಿತೇಶ್ವರಾ ॥೪೯

ನೋಡಿದೊಡೆಲ್ಲಿಯುಂ ತನುವಿನೊಳ್ಮತಿಸೋಲದೆ ಶುದ್ಧಜೀವನಂ ।
ನೋಡುವ ಮಾತನಾಡಿದೊಡೆ ಶಾಂತಿ ಶುಭಂ ಪದಣಾಗಿ ಪೇಳ್ವ ತಾಂ ॥
ಪಾಡಿದೊಡತ್ತಲಿತ್ತ ತೊಣದಾಡದೆ ನಿನ್ನೊಳೆ ನಟ್ಟ ಚಿತ್ತದಿಂ ।
ಪಾಡುವನಾಗಿಯುಂ ಕಡುವಿರಾಗಿಯಲಾ ಅಪರಾಜಿತೇಶ್ವರಾ ॥೫೦

ಕಣ್ಮಲರಳ್ಕರಿಂದೊಸಱೆ ನಿಮ್ಮನೆ ನೋಡುತುಮಂತರಂಗದೊಳ್ ।
ಪೊಣ್ಮೆ ವಿಶೋಧಿ ಭಾವಿಸುತೆ ನಾಲಗೆ ರಾಗಿಸೆ ಪಾಡುತಂಗದೊಳ್ ॥
ಉಣ್ಮಿರೆ ರೋಮಜಾಲಮೆಱಗುತ್ತನುಕಂಪನಮೆತ್ತ ಕೈಗಳಿಂ ।
ದಣ್ಮೆ ತಮಾಂಘ್ರಿಗ[2]ಳ್ಗಲರನರ್ಚಿಪೆನೆಂದಪರಾಜಿತೇಶ್ವರಾ ॥೫೧

1 ನಡಿವರೆ. ಖ॥ 2 ಳ್ಬಲರ. ಕ॥

ನೋಡಿದು ಚಿತ್ರಮೀಕ್ಷಿಸುವುದೆನ್ನ ನಿಜತ್ವಮದರ್ಕೆ ದೇಹಮ |
ಳ್ಳುಡದೆ ಕುಳ್ಳಿತಿರ್ಪ ಕೆಲಸಂ ದೊರೆಕೊಂಬುದು ಮೋಕ್ಷಮಿಂತಿದಂ ||
ಮಾಡುವುದರ್ಕೆ ನಾನಲಸಿ ಮೆಯ್ಮನ ಮಾತುಗಳಂ ಬಯಲ್ಗೆ ಜೋ |
ಡಾಡಿಸಿ ಕರ್ಮಮಂ ಕರೆವೆನಜ್ಞತೆಯಿಂದಪರಾಜಿತೇಶ್ವರಾ ||೧೨೧

ಚಿಂತಿಸವೇಳ್ಕುಮೆಂ ಬಿಡದೆ ಚಿಂತಿಕೆ ದೇಹದ ಕಷ್ಟಮಂ ಸುಖ|
ಭ್ರಾಂತಿಯನ್ನೆದು ಭೇದಭವಮಂ ನಷಭೇದಪದಾರ್ಥಮಂ ವ್ರತಾ ||
ನಂತವನರ್ಹದಾದಿಗಳ[1] ನಾತ್ಮನ ಕರ್ಮದ ರೂಪನೇಕೆನಲ್ |
ಚಿಂತೆಯಿದಸ್ತು ಚಿಂತೆಯನೆ ಮಾಳ್ಪುದಱಿಂದಪರಾಜಿತೇಶ್ವರಾ ||೧೨೨

ಅಳೆದಿರಿಸಿರ್ದುದಂ ಕುಡುವನಂತೆ ಪವಣ್ಗುಡಿಯಿಂದೆ ಭವ್ಯರಂ |
ತಿಳಿವುವ ಸುಮ್ಮನಿರ್ಪ ನಿಜಕಾರ್ಯಕೆ[2] ...ಮೃಗಂಬೊಲುರ್ವಿಯೊಳ್ ||
ಪೊಳೆವ ನಿವಿಕ್ತಮಂ ಪುಗುವ ಚೈತನಿಧಾನವನೀಕ್ಷಿಪಾತನಂ |
ತೊಳಗನೆ ಕಾಣ್ಬನೇ ಸಫಲಜನ್ಮನಲಾ ಅಪರಾಜಿತೇಶ್ವರಾ ||೧೨೩

ಮಱೆ ಸುರಿವಾಗಳೆಂತು ಪನಿಗಾಳಿಸಿಡಿಲ್ದನಿಗಳ್ಕ ಬಾಹ್ಯದೊಳ್|
ಸುಱಿಯದೆ ಗೇಹದೊಳ್ಸುಖಗಳಿರ್ಪುವಂತೆಲೆ ಯೋಗಿ ನೀನುಮಃ ||
ಗ್ಗಳಿವ ವಿಕಾರಜೃಂಭಣದ ದುಷ್ಪಮದೊಳ್ಪೊಱಗಾಡಬೇಡ ವ|
ಜ್ಜಳಸುತೆ ನಿನ್ನೊಳಿರ್ದು ಜಯಿಸೆಂದೆಯಲಾ ಅಪರಾಜಿತೇಶ್ವರಾ||೧೨೪

ನೀಡುದಿನಂ ನಿಜಾತ್ಮನನೆ ಭಾವಿಸಿ ಸಂಸ್ಕೃತನಾದ ಮೇಲೆ ತಾಂ |
ನೋಡುವುದಲ್ಲಿಯೇ ತಿಳಿವುದಲ್ಲಿಯೆ ಪೊರ್ದುವುದಲ್ಲಿಯೇ ಪ್ರಿಯಂ||
ಮಾಡುವುದಲ್ಲಿಯೇ ಸುಖಿಪುದಲ್ಲಿಯೆ ಅರ್ಚಿಪುದಲ್ಲಿಯೇ[3] ಮರ |
ಲ್ದಾಡುವುದಲ್ಲಿಯೇ ಪೋಱಗೆ ಮೆಚ್ಚನಲಾ ಅಪರಾಜಿತೇಶ್ವರಾ ||೧೨೫

1. ನಾತ್ಮದ. ಖ|| 2. ಪುರುಷ. ಖ|| 3. ಮೊರಲ್ದಾ. ಖ||

